**ಸಮಗ್ರ ಶಿಕ್ಷಣ-ಕರ್ನಾಟಕ**
ರಾಜ್ಯಯೋಜನಾ ನಿರ್ದೇಶಕರಕಛೇರಿ, ಹೊಸ ಸಾರ್ವಜನಿಕ ಕಟ್ಟಡಗಳ
ಪೂರಕಕಟ್ಟಡ, ನೃಪತುಂಗರಸ್ತೆ, ಬೆಂಗಳೂರು -೫೬೦ ೦೦೧.

ಸಂಖ್ಯೆ:ಎಸ್.ಎಸ್.ಕೆ/ಆ.ವಿ-ಆಯ್ಕೆ ಪಟ್ಟಿ ಪ್ರಕಟಣೆ/ದಾಖಲಾತಿ/2019-20 ದಿನಾಂಕ:29/04/2019

## ಸುತ್ತೋಲೆ

ವಿಷಯ: 2019-20ನೇ ಸಾಲಿಗೆ ಆದರ್ಶವಿದ್ಯಾಲಯಗಳ 6ನೇ ತರಗತಿಯ ದಾಖಲಾತಿ ಪ್ರಕ್ರಿಯೆಯನ್ನು ನಡೆಸುತ್ತಿರುವ ಬಗ್ಗೆ ಇಲಾಖಾಧಿಕಾರಿಗಳಿಗೆ ಹಾಗೂ ಪೋಷಕರಿಗೆ ಮಾರ್ಗಸೂಚಿ.

ಉಲ್ಲೇಖ: ಕಾರ್ಯನಿರ್ವಾಹಕ ನಿರ್ದೇಶಕರು, ಕೆ.ಎಸ್.ಕ್ಯೂ.ಎ.ಎ.ಸಿ, ಮಲ್ಲೇಶ್ವರಂ, ಬೆಂಗಳೂರು, ರವರು ನೀಡಿರುವ ಅಂಕಪಟ್ಟಿ.

******

2019-20ನೇ ಸಾಲಿನ ಆದರ್ಶ ವಿದ್ಯಾಲಯಗಳ 6ನೇ ತರಗತಿಗೆ ದಾಖಲಾತಿ ಸಂಬಂಧ ಆಯ್ಕೆ ಪರೀಕ್ಷೆಯನ್ನು ದಿನಾಂಕ 17/03/2019 ರಂದು ನಡೆಸಲಾಗಿದ್ದು, ಉಲ್ಲೇಖದನ್ವಯ ಮೌಲ್ಯಮಾಪನ ಕಾರ್ಯವನ್ನು ಕೆ.ಎಸ್.ಕ್ಯೂ.ಎ.ಎ.ಸಿ ರವರು ನಡೆಸಿದ್ದು, ಪರೀಕ್ಷೆಗೆ ಹಾಜರಾದ ಎಲ್ಲಾ ವಿದ್ಯಾರ್ಥಿಗಳು ಪಡೆದ ಅಂಕಪಟ್ಟಿಯನ್ನು ನೀಡಿರುತ್ತಾರೆ. ಇದನ್ನು ಆಧರಿಸಿ ಫಲಿತಾಂಶವನ್ನು ಪ್ರಕಟಿಸುವುದು ಹಾಗೂ ದಾಖಲಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗಿದ್ದು, ಪೋಷಕರು, ಉಪನಿರ್ದೇಶಕರು(ಆಡಳಿತ), ಉಪನಿರ್ದೇಶಕರು(ಅಭಿವೃದ್ಧಿ), ಕ್ಷೇತ್ರ ಶಿಕ್ಷಣಾಧಿಕಾರಿಗಳು, ಜಿಲ್ಲಾ ಉಪಸಮನ್ವಯಾಧಿಕಾರಿಗಳು ಹಾಗೂ ಆದರ್ಶ ವಿದ್ಯಾಲಯಗಳ ಮುಖ್ಯೋಪಾಧ್ಯಾಯರು ಕೆಳಕಂಡ ಸೂಚನೆಗಳನ್ನು ಅನುಸರಿಸಿ ದಾಖಲಾತಿ ಪ್ರಕ್ರಿಯೆಯನ್ನು ಪ್ರಾರಂಭಿಸುವಂತೆ ತಿಳಿಸಿದೆ.

ದಿನಾಂಕ 01/06/2019 ರಂದು ಆಯ್ಕೆ ಪಟ್ಟಿಯನ್ನು ಅನುಸರಿಸಿ ದಾಖಲಾತಿಯನ್ನು ಪ್ರಾರಂಭಿಸಿ ದಿನಾಂಕ 15/06/2019 ರೊಳಗಾಗಿ ಪೂರ್ಣಗೊಳಿಸುವಂತೆ ತೀರ್ಮಾನಿಸಲಾಗಿದ್ದು, ಸಾಕಷ್ಟು ಸಂಖ್ಯೆಯಲ್ಲಿ ಪೂರ್ವಸಿದ್ಧತಾ ಸಭೆಗಳನ್ನು ಉಪನಿರ್ದೇಶಕರು(ಆಡಳಿತ) ಮತ್ತು ಉಪನಿರ್ದೇಶಕರು(ಅಭಿವೃದ್ಧಿ) ರವರು ನಡೆಸಿ ಅಗತ್ಯ ಪೂರ್ವ ಸಿದ್ಧತೆಗಳನ್ನು ಕೈಗೊಳ್ಳುವುದರೊಂದಿಗೆ ಗೊಂದಲಗಳಿಗೆ ಅವಕಾಶವಿಲ್ಲದಂತೆ ನಿಷ್ಪಕ್ಷಪಾತವಾಗಿ ದಾಖಲಾತಿ ಪ್ರಕ್ರಿಯೆಯನ್ನು ಮಾಡಿಕೊಳ್ಳುವುದು.

### ಪೋಷಕರಿಗೆ ಸೂಚನೆಗಳು

1. ಅಂಕಪಟ್ಟಿಯನ್ನು ದಿನಾಂಕ 10/05/2019 ರಂದು ಬೆಳಿಗ್ಗೆ 10.00 ಗಂಟೆಗೆ http://vidyavahini.karnataka.gov.in ಹಾಗೂ http://www.schooleducation.kar.nic.in ವೆಬ್ ಪುಟಗಳಲ್ಲಿ ಏಕಕಾಲದಲ್ಲಿ ಪ್ರಕಟಿಸಲಾಗುವುದು. ಪರೀಕ್ಷೆ ಬರೆದ ಎಲ್ಲಾ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರು ಈ ಅಂಕಪಟ್ಟಿಯಲ್ಲಿ ಮಕ್ಕಳ ಅಂಕಗಳು ಹಾಗೂ ವಿವರಗಳನ್ನು ಪಡೆಯಬಹುದು.
2. ಅರ್ಜಿ ಸಲ್ಲಿಸುವ ಸಮಯದಲ್ಲಿ ಪೋಷಕರು ನೀಡಿರುವ ದೂರವಾಣಿ ಸಂಖ್ಯೆಗೂ ಸಹ ಮಕ್ಕಳು ಪಡೆದಿರುವ ಅಂಕಗಳ ಮಾಹಿತಿಯ ಸಂದೇಶವನ್ನು ಸಹ ರವಾನಿಸಲಾಗುವುದು.
3. ಅಂಕಗಳನ್ನು ಪಡೆದ ನಂತರ ಪೋಷಕರು ತಡಮಾಡದೇ ಅಂದೇ ಆದರ್ಶ ವಿದ್ಯಾಲಯಗಳ ಮುಖ್ಯೋಪಾಧ್ಯಾಯರನ್ನು ಭೇಟಿ ಮಾಡಿ ದಾಖಲಾತಿ ಮಾಡಿಕೊಳ್ಳಲು ಸಲ್ಲಿಸಬೇಕಾಗಿರುವ ದಾಖಲೆಗಳ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಪಡೆದು ಕೊಳ್ಳುವುದರೊಂದಿಗೆ ದಿನಾಂಕ 30/05/2019 ರೊಳಗಾಗಿ ದಾಖಲೆಗಳನ್ನು ಸಿದ್ಧಪಡಿಸಿಕೊಳ್ಳುವುದು.

4. ಆಯ್ಕೆಯಾದ ಪ್ರತಿ ವಿದ್ಯಾರ್ಥಿ/ವಿದ್ಯಾರ್ಥಿನಿಗೆ ದಾಖಲಾತಿಗಾಗಿ ಆದರ್ಶ ವಿದ್ಯಾಲಯಗಳಿಗೆ ಹಾಜರಾಗಬೇಕಾದ ದಿನಾಂಕ ಮತ್ತು ಸಮಯವನ್ನು ತಾತ್ಕಾಲಿಕವಾಗಿ ನಿಗದಿಗೊಳಿಸಲಾಗಿದೆ. ಇದು ತಾತ್ಕಾಲಿಕವಾಗಿದ್ದು, ಬದಲಾವಣೆಗಳಾದಲ್ಲಿ http://vidyavahini.karnataka.gov.in ಹಾಗೂ http://www.schooleducation.kar.nic.inರಲ್ಲಿ ಪ್ರಕಟಿಸಲಾಗುವುದು.

5. ಪ್ರವೇಶ ಪ್ರಕ್ರಿಯೆಯನ್ನು ನಿಗದಿಪಡಿಸಿದ ದಿನಗಳಂದು ಬೆಳಿಗ್ಗೆ 11.00 ಗಂಟೆಗೆ ಸರಿಯಾಗಿ ಪ್ರಾರಂಭಿಸಲಾಗುವುದು. ಎಲ್ಲಾ ಪೋಷಕರು ತಮ್ಮ ಮಕ್ಕಳೊಂದಿಗೆ ಆದರ್ಶ ವಿದ್ಯಾಲಯಗಳಿಗೆ ಸರಿಯಾಗಿ 10.00 ಗಂಟೆಗೆ ಹಾಜರಾಗುವುದನ್ನು ಕಡ್ಡಾಯಗೊಳಿಸಲಾಗಿದೆ. ಹಾಜರಾದ ಪೋಷಕರು ಆದರ್ಶ ವಿದ್ಯಾಲಯದಲ್ಲಿ ನಿರ್ವಹಿಸಲಾಗುವ ಹಾಜರಾತಿ ವಹಿಯಲ್ಲಿ ವಿದ್ಯಾರ್ಥಿಯ ನೋಂದಣಿ ಸಂಖ್ಯೆಯನ್ನು ನಮೂದಿಸಿ ಸಹಿಯನ್ನು ಮಾಡುವುದು. 10.30ರ ನಂತರ ಬರುವವರಿಗೆ ಅವಕಾಶ ನೀಡಲಾಗುವುದಿಲ್ಲ. ಆಯ್ಕೆಪಟ್ಟಿಯನ್ನು ಅನುಸರಿಸಿ ಇಳಿಕೆ ಕ್ರಮದಲ್ಲಿ ಮಕ್ಕಳ ದಾಖಲಾತಿಯನ್ನು ಮಾಡಲಾಗುತ್ತದೆ. ಪೋಷಕರು ಅಥವಾ ಮಕ್ಕಳು ಸಕಾಲದಲ್ಲಿ ಬಾರದಿದ್ದಲ್ಲಿ ಅವರ ಹೆಸರನ್ನು ಆಯ್ಕೆಪಟ್ಟಿಯಿಂದ ತೆಗೆದುಹಾಕಲಾಗುತ್ತದೆ. ಮುಂದೆ ಅವರಿಗೆ ಅವಕಾಶ ನೀಡಲಾಗುವುದಿಲ್ಲ. ಇದಕ್ಕೆ ಪೋಷಕರು ಹಾಗೂ ಮಕ್ಕಳೇ ಜವಾಬ್ದಾರರಾಗಿರುತ್ತಾರೆ.

6. ದಾಖಲೆಗಳನ್ನು ಸಲ್ಲಿಸುವಲ್ಲಿ ವಿಳಂಬವಾದಲ್ಲಿ, ಅಪೂರ್ಣ ದಾಖಲೆಗಳನ್ನು ಸಲ್ಲಿಸಿದಲ್ಲಿ ಅಥವಾ ನಿಗದಿಪಡಿಸಿದ ಸಮಯಕ್ಕೆ ಹಾಜರಾಗದಿದ್ದಲ್ಲಿ ಅವಕಾಶ ಪಡೆದ ವಿದ್ಯಾರ್ಥಿಯ/ವಿದ್ಯಾರ್ಥಿನಿಯ ಮತ್ತೊಮ್ಮೆ ಅವಕಾಶ ನೀಡದೇ ದಾಖಲಾತಿಯನ್ನು ರದ್ದುಗೊಳಿಸಿ ಅರ್ಹತೆಯನ್ನು ಪಡೆಯುವ ಮುಂದಿನ ಕ್ರಮಾಂಕದ ವಿದ್ಯಾರ್ಥಿ/ವಿದ್ಯಾರ್ಥಿನಿಗೆ ಅವಕಾಶ ನೀಡಲಾಗುವುದು.

## ಆದರ್ಶ ವಿದ್ಯಾಲಯಗಳ ಮುಖ್ಯೋಪಾಧ್ಯಾಯರಿಗೆ ಸೂಚನೆಗಳು

1. ಆಯಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಸಹಕಾರದೊಂದಿಗೆ ದಿನಾಂಕ 15/05/2019 ರಂದು ಅಧಿಕೃತ ದಿನಪತ್ರಿಕೆಯಲ್ಲಿ ದಾಖಲಾತಿ ಪ್ರಕ್ರಿಯೆ ಪ್ರಾರಂಭವಾಗಿರುವ ಬಗ್ಗೆ ಪ್ರಕಟಣೆಯನ್ನು ನೀಡುವುದು. ಪ್ರಕಟಣೆಗೆ ನೀಡಬೇಕಾಗಿರುವ ಸಾಮಾನ್ಯವಾದ ವಿವರವು ಈ ಕೆಳಕಂಡಂತಿದ್ದು, ಆಯಾ ತಾಲ್ಲೂಕಿಗೆ ಅನುಗುಣವಾದ ಇನ್ನಿತರ ಅಂಶಗಳನ್ನು ನಿಯಮಗಳ ಉಲ್ಲಂಘನೆಯಾಗದಂತೆ ಅಳವಡಿಸಿಕೊಳ್ಳುವ ಕಾರ್ಯವನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಕೈಗೊಳ್ಳುವುದು.

### ಪತ್ರಿಕಾ ಪ್ರಕಟಣೆಯಲ್ಲಿ ಅಳವಡಿಸಬೇಕಾದ ಮಾಹಿತಿ

**ಸಾರ್ವಜನಿಕ ಶಿಕ್ಷಣ ಇಲಾಖೆ________________ಜಿಲ್ಲೆ, ____________ತಾಲ್ಲೂಕು**

ಸರ್ಕಾರಿ ಆದರ್ಶ ವಿದ್ಯಾಲಯದ 6ನೇ ತರಗತಿ ದಾಖಲಾತಿ ಪ್ರಕ್ರಿಯೆ : 2019-20

ಈ ಮೂಲಕ ಎಲ್ಲಾ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ, 2019-20ನೇ ಸಾಲಿಗೆ ಸರ್ಕಾರಿ ಆದರ್ಶ ವಿದ್ಯಾಲಯಗಳಲ್ಲಿ 6ನೇ ತರಗತಿಯ ದಾಖಲಾತಿಗೆ ಸಂಬಂಧಿಸಿದಂತೆ ನಡೆಸಲಾದ ಪ್ರವೇಶ ಪರೀಕ್ಷೆಯ ಅಕಪಟ್ಟಿಯನ್ನು ದಿನಾಂಕ 10/05/2019 ರಂದು ಹಾಗೂ ಆಯಕೆಪಟ್ಟಿಯನ್ನು ದಿನಾಂಕ 15/05/2019 ರಂದು http://vidyavahini.karnataka.gov.in ಹಾಗೂ http://www.schooleducation.kar.nic.inರಲ್ಲಿ ಪ್ರಕಟಿಸಲಾಗಿದೆ. ಪೋಷಕರು ಈ ವೆಬ್‌ಸೈಟ್‌ಗಳಲ್ಲಿ ಮಕ್ಕಳ ಫಲಿತಾಂಶವನ್ನು ಪಡೆದುಕೊಂಡ ಕೂಡಲೇ ಕ್ಷೇತ್ರ ಶಿಕ್ಷಣಾಧಿಕಾರಿಗಳು ಅಥವಾ ಆದರ್ಶ ವಿದ್ಯಾಲಯಗಳ ಮುಖ್ಯೋಪಾಧ್ಯಾಯರನ್ನು ಸಂಪರ್ಕಿಸಿ ದಾಖಲಾತಿ ಪ್ರಕ್ರಿಯೆಯ ಮಾಹಿತಿ ಪಡೆದು ಎಲ್ಲಾ ಅಗತ್ಯ ದಾಖಲೆಗಳೊಂದಿಗೆ ನಿಗದಿಪಡಿಸಿದ ದಿನಾಂಕದಂದೇ ಸೂಚಿಸಿದ ಸಮಯಕ್ಕೆ ಆದರ್ಶ ವಿದ್ಯಾಲಯಕ್ಕೆ ಹಾಜರಾಗಿ ದಾಖಲಾತಿ ಮಾಡಿಕೊಳ್ಳುವುದು. ವಿಳಂಬವಾದಲ್ಲಿ ಅಥವಾ ನಿಯಮಾನುಸಾರವಾಗಿ ದಾಖಲೆಗಳನ್ನು ಸಲ್ಲಿಸದಿದ್ದಲ್ಲಿ ಆಯ್ಕೆಯನ್ನು ರದ್ದುಗೊಳಿಸಲಾಗುವುದು.

ಸಂಪರ್ಕಿಸಬೇಕಾದ ದೂರವಾಣಿ ಸಂಖ್ಯೆ ____________ & ____________

**(BOTH BEO's AND OFFICE LAND LINE NUMBER ONLY SHOULD BE COMPULSORILY ADDED)**

2. ದಿನಾಂಕ 15/05/2019 ರೊಳಗಾಗಿ ಎಲ್ಲಾ ಆದರ್ಶ ವಿದ್ಯಾಲಯಗಳ ಮುಖ್ಯೋಪಾಧ್ಯಾಯರು ಪೋಷಕರಿಗೆ ಹಾಗೂ ಮಕ್ಕಳಿಗೆ ದಾಖಲಾತಿ ಸಮಯದಲ್ಲಿ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ಸೂಚನೆಗಳನ್ನು ತಮ್ಮ ಜಿಲ್ಲೆಯ ಜಿಲ್ಲಾಧಿಕಾರಿಗಳು, ಉಪನಿರ್ದೇಶಕರು(ಆಡಳಿತ), ಉಪನಿರ್ದೇಶಕರು(ಅಭಿವೃದ್ಧಿ), ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮನ್ವಯಾಧಿಕಾರಿಗಳು, ತಹಶೀಲ್ದಾರ್ ಕಛೇರಿ ಹಾಗೂ ಇನ್ನಿತರ ಎಲ್ಲಾ ಸಾರ್ವಜನಿಕ ಸ್ಥಳಗಳಲ್ಲಿ ಕೆಳಕಂಡಂತೆ ಸಿದ್ಧಪಡಿಸಿ ನಾಮಫಲಕಗಳಲ್ಲಿ ಅಳವಡಿಸುವುದು.
   - ದಾಖಲಾತಿ ಮಾಡಿಕೊಳ್ಳುವ ಬಗ್ಗೆ ಪೋಷಕರ ಲಿಖಿತ ಮನವಿ.
   - ವಿದ್ಯಾರ್ಥಿಯ ಗುರುತಿಗಾಗಿ ಆಧಾರ್ ಕಾರ್ಡ್, ಪಡಿತರ ಚೀಟಿ ಇತ್ಯಾದಿ.
   - ಬೇರೆ ತಾಲ್ಲೂಕಿನಲ್ಲಿ, ಜಿಲ್ಲೆಯಲ್ಲಿ ಅಥವಾ ರಾಜ್ಯದಲ್ಲಿ ವ್ಯಾಸಂಗ ಮಾಡುತ್ತಿದ್ದು ಸ್ವಂತ ತಾಲ್ಲೂಕಿನಲ್ಲಿ ದಾಖಲಾತಿ ಬಯಸುವ ಆದರ್ಶ ವಿದ್ಯಾಲಯದ ತಾಲ್ಲೂಕಿನ ಮೂಲ ನಿವಾಸಿಗಳು ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ನಿಯಮಾನುಸಾರವಾದ ವಾಸಸ್ಥಳ ದೃಢೀಕರಣ ಪ್ರಮಾಣ ಪತ್ರ.
   - ಮೀಸಲಾತಿಯಡಿಯಲ್ಲಿ ದಾಖಲಾಗುತ್ತಿದ್ದಲ್ಲಿ, ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ನಿಯಮನುಸಾರವಾದ ಜಾತಿ/ಅಗತ್ಯವಿದ್ದಲ್ಲಿ ಆದಾಯ ದೃಢೀಕಣ ಪ್ರಮಾಣಪತ್ರ.
   - ವಿದ್ಯಾರ್ಥಿ/ವಿದ್ಯಾರ್ಥಿನಿಯ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಎರಡು ಬಣ್ಣದ ಭಾವಚಿತ್ರ.
   - ವಿದ್ಯಾರ್ಥಿ/ವಿದ್ಯಾರ್ಥಿನಿಯು 5ನೇ ತರಗತಿಯನ್ನು ವ್ಯಾಸಂಗ ಮಾಡುತ್ತಿರುವ ಶಾಲೆಗೆ ವರ್ಗಾವಣೆ ಬಯಸಿ ಎಸ್.ಎ.ಟಿ.ಎಸ್‌ನಲ್ಲಿ ವರ್ಗಾವಣೆಗೆ ಅಗತ್ಯ ಕಾರ್ಯವನ್ನು ಮಾಡುವಂತೆ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯರಿಗೆ ಸಿದ್ಧಪಡಿಸಿದ ಲಿಖಿತ ಮನವಿಯನ್ನು ಸಲ್ಲಿಸಿ ಸ್ವೀಕೃತಿ ಪಡೆದಿರುವ ಪತ್ರದ ಪ್ರತಿ.
   - ಸಾಂದರ್ಭಿಕವಾಗಿ ಹಾಗೂ ಅಗತ್ಯವಿರುವ ಇನ್ನಿತರ ಎಲ್ಲಾ ಮಾಹಿತಿಯನ್ನು ಸಲ್ಲಿಸಬೇಕಾಗಿರುವ ಪೋಷಕರಿಗೆ ಸವಿವರವಾಗಿ ತಿಳಿಸಿ ಅಗತ್ಯ ಮಾರ್ಗದರ್ಶನ ನೀಡುವುದು.
3. ದಾಖಲಾತಿಗಾಗಿ ಆಗಮಿಸುವ ವಿದ್ಯಾರ್ಥಿಗಳ ಮತ್ತು ಪೋಷಕರ ಹಾಜರಾತಿ ವಹಿಯನ್ನು ತಪ್ಪದೇ ನಿರ್ವಹಿಸುವುದು.
4. ದಾಖಲಾತಿ ಮಾಡಿಕೊಳ್ಳುವ ಪೂರ್ವದಲ್ಲಿ ಆದರ್ಶ ವಿದ್ಯಾಲಯದ ಮುಖ್ಯೋಪಾಧ್ಯಾಯರು ಮತ್ತು ಡಯಟ್ ನೋಡೆಲ್ ಅಧಿಕಾರಿಗಳು ಜಂಟಿಯಾಗಿ ವಿದ್ಯಾರ್ಥಿಯ ಎಲ್ಲಾ ದಾಖಲೆಗಳನ್ನು ವಿದ್ಯಾವಾಹಿನಿಯಲ್ಲಿ ಒದಗಿಸುವ ಪ್ರವೇಶ ಮನವಿ ನಮೂನೆಯ ಮುದ್ರಿತ ಪ್ರತಿಯೊಂದಿಗೆ ಮತ್ತು ಇತರೆ ದಾಖಲೆಗಳೊಂದಿಗೆ ಪರಿಶೀಲಿಸಿ ನಿಗದಿಪಡಿಸಿರುವ ಅಂಕಣದಲ್ಲಿ ಅವುಗಳನ್ನು ಜಂಟಿಯಾಗಿ ಸಹಿ ಮತ್ತು ಮೊಹರು ಸಹಿತ ದೃಢೀಕರಿಸಿದ ನಂತರವೇ ವಿದ್ಯಾವಾಹಿನಿಯಲ್ಲಿ ದಾಖಲಾತಿಯನ್ನು ಮಾಡಿಕೊಳ್ಳಲಾಗುವುದು.
5. ವಿದ್ಯಾವಾಹಿನಿಯಲ್ಲಿ ತಾಂತ್ರಿಕವಾಗಿ ದಾಖಲಾತಿಯನ್ನು ಮಾಡಿದ ನಂತರವೇ ಎಸ್.ಎ.ಟಿ.ಎಸ್ ತಂತ್ರಾಂಶದಲ್ಲಿ ದಾಖಲಾತಿಯನ್ನು ಮಾಡಿಕೊಳ್ಳುವುದು. ಎಸ್.ಎ.ಟಿ.ಎಸ್ ತಂತ್ರಾಂಶದಲ್ಲಿ ದಾಖಲಾತಿ ಮಾಡಿ ಶಾಲೆಯ ದಾಖಲಾತಿ ವಹಿಯಲ್ಲಿ ಎಲ್ಲಾ ನಮೂದುಗಳನ್ನು ಮಾಡಿದಾಗ ಮಾತ್ರ ದಾಖಲಾತಿ ಸಕ್ರಮವಾಗುವುದು.

## ಡಯಟ್ ಪ್ರಾಂಶುಪಾಲರು, ಉಪನಿರ್ದೇಶಕರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಚನೆಗಳು

1. ಡಯಟ್ ವತಿಯಿಂದ ಪರೀಕ್ಷಾ ಕಾರ್ಯಕ್ಕೆ ನೇಮಿಸಲಾದ ತಾಲ್ಲೂಕು ನೋಡೆಲ್ ಅಧಿಕಾರಿಗಳನ್ನು ಕಡ್ಡಾಯವಾಗಿ ದಾಖಲಾತಿಯ ಕಾರ್ಯಕ್ಕೂ ಸಹ ನೋಡೆಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದ್ದು ಅಗತ್ಯ ಸೂಚನೆಗಳನ್ನು ಡಯಟ್ ಪ್ರಾಂಶುಪಾಲರು ನೀಡುವುದು. ಒಂದು ವೇಳೆ ಅಧಿಕಾರಿಗಳು ಅನಿವಾರ್ಯವಾದ ಇಲಾಖೆಯ ಇತರೆ ತುರ್ತು ಕಾರ್ಯಕ್ಕಾಗಿ ನಿಯೋಜಿತರಾಗಿದ್ದಲ್ಲಿ, ಬದಲಿ ವ್ಯವಸ್ಥೆಯನ್ನು ಡಯಟ್ ಪ್ರಾಂಶುಪಾಲರು ಮಾಡುವುದನ್ನು ಕಡ್ಡಾಯಗೊಳಿಸಲಾಗಿದೆ. ಇದಕ್ಕಾಗಿ ಜಿಲ್ಲಾ ಹಂತದ ಯಾವುದೇ ಕಛೇರಿಯ ಗ್ರೂಪ್-ಎ ಅಥವಾ ಗ್ರೂಪ್-ಬಿ ಅಧಿಕಾರಿಗಳನ್ನು (ಪ್ರೌಢ ಶಾಲಾ ಮುಖ್ಯೋಪಾಧ್ಯಾಯರನ್ನು ಹೊರತುಪಡಿಸಿ) ದಾಖಲಾತಿ ನಡೆಯುವ ಸಂದರ್ಭದಲ್ಲಿ ಸಂಪೂರ್ಣವಾಗಿ ನಿಯೋಜನೆ ಮಾಡುವುದು. ನಿಯೋಜಿತ ಅಧಿಕಾರಿಯ ಹೆಸರು, ಹುದ್ದೆ, ವಿಳಾಸ ಮತ್ತು ದೂರವಾಣಿ ಸಂಖ್ಯೆಗಳ ಮಾಹಿತಿಯನ್ನು ದಿನಾಂಕ 15/05/2019 ರೊಳಗಾಗಿ ಈ ಕಛೇರಿಗೆ ಆಂಗ್ಲ ಭಾಷೆಯಲ್ಲಿ ಮುದ್ರಿಸಿ ಸಾಫ್ಟ್ ಪ್ರತಿಯನ್ನು ಇ-ಮೇಲ್ ಮೂಲಕ ಹಾಗೂ ಒಂದು ಪತ್ರವನ್ನು ಟಪಾಲಿನ ಮೂಲಕ ಕಳುಹಿಸುವುದು. ಉಪನಿರ್ದೇಶಕರು(ಆಡಳಿತ) ರವರು ಡಯಟ್ ಪ್ರಾಂಶುಪಾಲರಿಗೆ ಸಂಪೂರ್ಣವಾದ ಸಹಕಾರವನ್ನು ನೀಡುವುದು.
2. ದಾಖಲಾತಿ ನಡೆಯುವ ದಿನಾಂಕಗಳಂದು ಕ್ಷೇತ್ರ ಶಿಕ್ಷಣಾಧಿಕಾರಿಗಳು ಖುದ್ದಾಗಿ ಆದರ್ಶ ವಿದ್ಯಾಲಯಗಳಲ್ಲಿ ಹಾಜರಿದ್ದು, ದಾಖಲಾತಿ ಪ್ರಕ್ರಿಯೆಯ ಉಸ್ತುವಾರಿ ಕಾರ್ಯವನ್ನು ಮಾಡುವುದರೊಂದಿಗೆ ಸುಸೂತ್ರವಾಗಿ ದಾಖಲಾತಿ ನಡೆಸುವಲ್ಲಿ ಅಗತ್ಯ ಕ್ರಮ ವಹಿಸುವುದು.
3. ಪ್ರತಿನಿತ್ಯ ದಾಖಲಾತಿ ಪ್ರಕ್ರಿಯೆಯನ್ನು ಬೆಳಿಗ್ಗೆ 10.00 ಗಂಟೆಗೆ ಪ್ರಾರಂಭಿಸಿ ಸಂಜೆ 5.00ಕ್ಕೆ ಪೂರ್ಣಗೊಳಿಸುವುದು. ದಾಖಲಾದ ಮಕ್ಕಳು, ಗೈರುಹಾಜರಾದ ಮಕ್ಕಳು ಹಾಗೂ ಇನ್ನಿತರ ಪ್ರಕ್ರಿಯೆಗಳ ನಡಾವಳಿಯನ್ನು ಮಾಡುವುದು. ರಾಜ್ಯ ಕಛೇರಿಯಲ್ಲಿ ಇದರ ಮಾಹಿತಿಯನ್ನು ತಾಂತ್ರಿಕವಾಗಿ ಪರಿಶೀಲಿಸಲಾಗುವುದು.
4. ಎಸ್.ಡಿ.ಎಮ್.ಸಿ ಸಮಿತಿಯವರನ್ನು ಸಹ ಈ ಕಾರ್ಯಕ್ಕೆ ಹಾಜರಾಗುವಂತೆ ಸಕಾಲದಲ್ಲಿ ಲಿಖಿತವಾಗಿ ಪತ್ರವನ್ನು ನೀಡಿ ಆಹ್ವಾನಿಸುವುದು.
5. ಜಿಲ್ಲೆಯ ಎಲ್ಲಾ ಸ್ಥರದ ಅಧಿಕಾರಿಗಳು ಇಂದಿನಿಂದಲೇ ಕಾಲಕಾಲಕ್ಕೆ ಆದರ್ಶ ವಿದ್ಯಾಲಯಗಳಿಗೆ ಭೇಟಿ ನೀಡಿ ಅಗತ್ಯ ಮಾರ್ಗದರ್ಶನವನ್ನು ನೀಡುವುದು. ಇದರ ವರದಿಯನ್ನು ರಾಜ್ಯ ಕಛೇರಿಗೆ ನಿಯತವಾಗಿ ಸಲ್ಲಿಸುವುದು.
6. ಜಿಲ್ಲಾ ಹಂತದಲ್ಲಿ ಎಲ್ಲಾ ಅಧಿಕಾರಿಗಳನ್ನೊಳಗೊಂಡಂತೆ ದಿನಾಂಕ 14/05/2019 ರಂದು ಸಭೆಯನ್ನು ಆಯೋಜಿಸಿ ಅಗತ್ಯ ಮಾರ್ಗದರ್ಶನವನ್ನು ಡಯಟ್ ಪ್ರಾಂಶುಪಾಲರು ಮಾಡುವುದು.

7. ಎಲ್ಲಾ ಆದರ್ಶ ವಿದ್ಯಾಲಯಗಳಲ್ಲಿ 6ನೇ ತರಗತಿಗೆ ಪೂರ್ಣ ಪ್ರಮಾಣದಲ್ಲಿ 80 ಮಕ್ಕಳನ್ನು ದಾಖಲಾತಿ ಮಾಡಿಸುವ ಜವಾಬ್ದಾರಿಯು ಆಯಾ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳದ್ದಾಗಿರುತ್ತದೆ. ದೇವದುರ್ಗ, ಗುಡಿಬಂಡೆ, ಸುರಪುರ ಹಾಗೂ ಶ್ರೀನಿವಾಸಪುರ ಹಾಗೂ ಇನ್ನಿತರ ತಾಲ್ಲೂಕುಗಳಲ್ಲಿ ಈ ಹಿಂದಿನ ಸಾಲಿನಲ್ಲಿ ಪೂರ್ಣ ಪ್ರಮಾಣದಲ್ಲಿ ದಾಖಲಾತಿಯಾಗದಿರುವುದನ್ನು ಹಾಗೂ ಗೋಕಾಕ್ ತಾಲ್ಲೂಕಿನಲ್ಲಿ ಉದ್ಭವಿಸಿದ ವಿಳಂಬವನ್ನು ಗಮನದಲ್ಲಿರಿಸಿದ್ದು, ಈ ಬಾರಿ 2019ರ ಜೂನ್ 15ನೇ ತಾರೀಖಿನೊಳಗೆ ಪೂರ್ಣ ಪ್ರಮಾಣದಲ್ಲಿ ದಾಖಲಾತಿ ಮಾಡಲು ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳು ವಹಿಸುವುದರೊಂದಿಗೆ ಸರ್ಕಾರದ ಮಹತ್ತರವಾದ ಕಾರ್ಯಕ್ರಮವಾದ ಆದರ್ಶ ವಿದ್ಯಾಲಯಗಳ ಸೌಲಭ್ಯವನ್ನು ಮಕ್ಕಳಿಗೆ ದೊರೆಯುವಂತೆ ಮಾಡುವುದು.
8. ತಾಲ್ಲೂಕು ಕೇಂದ್ರಗಳಿಂದ ದೂರದಲ್ಲಿರುವ ಎಲ್ಲಾ ಆದರ್ಶ ವಿದ್ಯಾಲಯಗಳಿಗೆ ಸರ್ಕಾರಿ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಲು ದಿನಾಂಕ 15/05/2019 ರೊಳಗಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕೆ.ಎಸ್.ಆರ್.ಟಿ.ಸಿಯೊಂದಿಗೆ ಸಂಪರ್ಕಿಸಿ ಸಾರಿಗೆ ಸೌಲಭ್ಯವನ್ನು ಒದಗಿಸುವುದು.
9. ರಾಜ್ಯ ಕಛೇರಿಯ ವತಿಯಿಂದ ಅಧಿಕಾರಿಗಳನ್ನು ಮೇಲಿನ ಎಲ್ಲಾ ಕಾರ್ಯಗಳನ್ನು ಪರಿಶೀಲಿಸಲಾಗುವುದು.
10. ಅಪರ ಆಯುಕ್ತರ ಕಛೇರಿಯ ಅಧಿಕಾರಿಗಳನ್ನು ಸಹ ಈ ಕಾರ್ಯದ ಪರಿಶೀಲನೆಗಾಗಿ ನಿಯೋಜಿಸುವಂತೆ ಕೋರಿ ಉಪನಿರ್ದೇಶಕರು(ಅಭಿವೃದ್ಧಿ) ರವರು ಲಿಖಿತ ಮನವಿಯನ್ನು ಸಲ್ಲಿಸುವುದು.

**ಕೇಂದ್ರೀಯ ದಾಖಲಾತಿ ಘಟಕ, ಬೆಂಗಳೂರು ಹಾಗೂ ಸಮಗ್ರ ಶಿಕ್ಷಣ-ಕರ್ನಾಟಕ, ಬೆಂಗಳೂರು ಗಣಕಯಂತ್ರ ಅಭಿಯಂತರರು, ಸಮಗ್ರ ಶಿಕ್ಷಣ-ಕರ್ನಾಟಕ, ಬೆಂಗಳೂರು ರವರಿಗೆ ಸೂಚನೆಗಳು**

1. ವಿದ್ಯಾವಾಹಿನಿ ಹಾಗೂ ಎಸ್.ಎ.ಟಿ.ಎಸ್. ಸೌಲಭ್ಯವನ್ನು ದಾಖಲಾತಿ ಪ್ರಕ್ರಿಯೆಯನ್ನು ತಾಂತ್ರಿಕವಾಗಿ ನಡೆಸಲು ಅಗತ್ಯವಿರುವ ರೀತಿಯಲ್ಲಿ ಜಂಟಿಗೊಳಿಸಲು ಅಗತ್ಯ ಕ್ರಮ ವಹಿಸುವುದು.
2. ಕೆ.ಎಸ್.ಕ್ಯೂ.ಎ.ಎ.ಸಿ ರವರು ನೀಡಿರುವ ಅಂಕಪಟ್ಟಿಯನ್ನು ಆಧರಿಸಿ ಮೀಸಲಾತಿಯನ್ನು ಅನುಸರಿಸಿ ಆಯ್ಕೆಪಟ್ಟಿಯನ್ನು ಸಿದ್ಧಪಡಿಸಿ http://vidyavahini.karnataka.gov.in ಹಾಗೂ http://www.schooleducation.kar.nic.in ತಂತ್ರಾಂಶದ ವೆಬ್‌ಸೈಟ್‌ನಲ್ಲಿ ಅಳವಡಿಸುವ ಜವಾಬ್ದಾರಿಯನ್ನು ಪ್ರತಿ ಸಾಲಿನಂತೆ ಈ ಬಾರಿಯೂ ಸಹ ಕೇಂದ್ರೀಯ ದಾಖಲಾತಿ ಘಟಕ, ಬೆಂಗಳೂರು (ಸಿ.ಎ.ಸಿ) ರವರಿಗೆ ವಹಿಸಲಾಗಿದೆ. ಈ ಆಯ್ಕೆ ಪಟ್ಟಿಯನ್ನು ದಿನಾಂಕ 15/05/2019 ರಂದು ಬೆಳಿಗ್ಗೆ 10.00 ಗಂಟೆಗೆ http://vidyavahini.karnataka.gov.in ಹಾಗೂ http://www.schooleducation.kar.nic.in ವೆಬ್ ಪುಟಗಳಲ್ಲಿ ಅಳವಡಿಸಬೇಕಾಗಿದ್ದು, ಸಕಾಲದಲ್ಲಿ ಎಲ್ಲಾ ಪೂರ್ವಸಿದ್ಧತೆಗಳನ್ನು ಮಾಡುವುದು.

3. ಅಂಕಪಟ್ಟಿಯನ್ನು ಪೋಷಕರು ಮುದ್ರಣ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದ್ದು, ಕೆಳಕಂಡಂತೆ ವಿನ್ಯಾಸಗೊಳಿಸುವುದು.

| ADARSHA VIDYALAYA, ENTRANCE EXAM MARCH-2019, | ALLOTMENT CARD |
|---|---|
| STUDENT NAME | |
| REGISTER NUMBER | |
| FATHER'S NAME | |
| DATE OF BIRTH | |
| CATEGORY UNDER WHICH RESERVATION IS CLAIMED | |
| PRESENT SCHOOL NAME (5$^{TH}$ STANDARD) | |
| SELECTED ADARSHA VIDYALAYA's TALUK | |
| MARKS OBTAINED | |
| SELECTED CATEGORY | |
| SERIES IN WHICH YOUR CHILD IS SELECTED | |
| TENTATIVE DATE OF ADMISSION | |
| TENTATIVE TIME OF ADMISSION | 10.00AM |

4. ದಿನಾಂಕ 16/05/2019 ರಂದೇ http://vidyavahini.karnataka.gov.in ಹಾಗೂ http://www.schooleducation.kar.nic.inಗಳಲ್ಲಿ ಮೊದಲನೆಯ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸಿ ಅಳವಡಿಸುವುದು. ದಾಖಲಾತಿಯ ವೇಳಾಪಟ್ಟಿಯು ಕೆಳಕಂಡಂತೆ ನಿಗದಿಗೊಳಿಸಲಾಗಿದೆ.

| ಹಂತ | ದಿನಾಂಕ | ಸಮಯ |
|---|---|---|
| ಒಂದು : SERIES-A(80 ಮಕ್ಕಳು) | ದಿನಾಂಕ 17/05/2019 ರಿಂದ 01/06/2019 | ಬೆಳಿಗ್ಗೆ 10.00 ಗಂಟೆ |
| ಎರಡು : SERIES-B | 04/06/2019 | ಬೆಳಿಗ್ಗೆ 10.00 ಗಂಟೆ |
| ಮೂರು : SERIES-C | 08/06/2019 | ಬೆಳಿಗ್ಗೆ 10.00 ಗಂಟೆ |
| ನಾಲ್ಕು : SERIES-D | 12/06/2019 | ಬೆಳಿಗ್ಗೆ 10.00 ಗಂಟೆ |
| ಐದು : SERIES-E | 17/06/2019 | ಬೆಳಿಗ್ಗೆ 10.00 ಗಂಟೆ |

5. ಅರ್ಹತೆಯನ್ನು ಪಡೆದ ವಿದ್ಯಾರ್ಥಿಗಳ ಮೊದಲ ಪಟ್ಟಿ, SERIES-Aಯನ್ವಯ ದಿನಾಂಕ ದಿನಾಂಕ 17/05/2019 ರಿಂದ 01.06.2019 ರವರೆಗೆ ಬೆಳಿಗ್ಗೆ 10.00 ಗಂಟೆಯಿಂದ ಸಂಜೆ 5.00 ರವರೆಗೂ ದಾಖಲಾತಿ ಪ್ರಕ್ರಿಯೆಗಳನ್ನು ನಡೆಸುವುದು. ಮೊದಲು ವಿದ್ಯಾವಾಹಿನಿಯಲ್ಲಿ ದಾಖಲೆಯನ್ನು ಸಂಜೆ 5.00ರವರೆಗೂ ಮೇಲಿನ ಎಲ್ಲಾ ಸೂಚನೆಗಳನ್ನು ಅನುಸರಿಸಿ ಪೂರ್ಣಗೊಳಿಸಿದ ನಂತರ ದಿನಾಂಕ 01/06/2019 ರೊಳಗಾಗಿ 5ನೇ ತರಗತಿ ವ್ಯಾಸಂಗ ಮಾಡಿರುವ ಶಾಲೆಯಿಂದ ಎಸ್.ಎ.ಟಿ.ಎಸ್. ತಂತ್ರಾಂಶದಲ್ಲಿ transfer ~~out~~ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ ದಿನಾಂಕ 02/06/2019 ರಂದು ಸಂಜೆ 5.30ರೊಳಗಾಗಿ ಆದರ್ಶ ವಿದ್ಯಾಲಯದ ಎಸ್.ಎ.ಟಿ.ಎಸ್ ತಂತ್ರಾಂಶದಲ್ಲಿ ದಾಖಲಾತಿಯನ್ನು ಪೂರ್ಣಗೊಳಿಸುವುದನ್ನು ಕಡ್ಡಾಯಗೊಳಿಸಲಾಗಿದೆ (ಪ್ರಾಥಮಿಕ ಹಾಗೂ ಆದರ್ಶ ವಿದ್ಯಾಲಯಗಳ ಮುಖ್ಯೋಪಾಧ್ಯಾಯರಿಗೆ ಸೂಚನೆ). ಎಸ್.ಎ.ಟಿ.ಎಸ್‌ನಲ್ಲಿದ್ದಂತೆ ವರದಿಯನ್ನು ಡೌನ್ಲೋಡ್ ಮಾಡಿ ಯಥಾವತ್ತಾದ ಪ್ರತಿಯನ್ನು ಆದರ್ಶ ವಿದ್ಯಾಲಯದ ಮುಖ್ಯೋಪಾಧ್ಯಾಯರು ಹಾಗೂ ಡಯಟ್ ನೋಡೆಲ್ ಅಧಿಕಾರಿಗಳು ಜಂಟಿಯಾಗಿ ದೃಢೀಕರಿಸಿ ಆದರ್ಶ ವಿದ್ಯಾಲಯದಲ್ಲಿ ಕಡತಗೊಳಿಸುವುದು. SERIES-Aಯನ್ವಯ ದಾಖಲಾತಿಗೆ ಗೈರುಹಾಜರಾದ ಮಕ್ಕಳ ಹೆಸರನ್ನು ದಿನಾಂಕ 01/06/2019 ರಂದೇ ಸರಿಯಾದ ಸಮಯಕ್ಕೆ ಹೆಸರನ್ನು ವಿದ್ಯಾವಾಹಿನಿಯ ತಂತ್ರಾಂಶದಲ್ಲಿ ತೆಗೆದುಹಾಕಲಾಗುವುದು. ಮುಂದೆ ಈ ವಿದ್ಯಾರ್ಥಿಯ ದಾಖಲಾತಿಗೆ ಅವಕಾಶ

ನೀಡಲಾಗುವುದಿಲ್ಲ. ಮೊದಲನೆಯ ಹಂತದಲ್ಲಿನ ದಾಖಲಾತಿಯ ನಂತರ ಉಳಿದ ಸೀಟುಗಳಿಗೆ ರೋಸ್ಟರ್ ಪ್ರಕಾರ ಆಯಕೆಪಟ್ಟಿ **SERIES-B**ಯನ್ನು ದಿನಾಂಕ 03/06/2019 ರಂದು ಸಂಜೆ 5.30ರ ನಂತರ ಕೇಂದ್ರೀಯ ದಾಖಲಾತಿ ಘಟಕ ರವರು ಸಿದ್ಧಪಡಿಸಿ ಅಂದೇ ಸಮಗ್ರ ಶಿಕ್ಷಣ-ಕರ್ನಾಟಕ, ಬೆಂಗಳೂರು ರವರಿಗೆ ನೀಡುವುದು. ಇದೇ ರೀತಿ ಪ್ರತಿ ಆಯ್ಕೆಪಟ್ಟಿಯನ್ನು ಸಿದ್ಧಪಡಿಸಿದ ನಂತರ ಮಾರನೆಯ ದಿನವೇ ದಾಖಲಾತಿ ಪ್ರಕ್ರಿಯೆಯನ್ನು ನಡೆಸಿ ಪೂರ್ಣಗೊಳಿಸಲಾಗುತ್ತಿರುವುದರಿಂದ ಪೋಷಕರು ಹಾಗೂ ಮಕ್ಕಳು ಅಗತ್ಯಪೂರ್ವಸಿದ್ಧತೆಗಳನ್ನು ಸಕಾಲದಲ್ಲಿ ಮಾಡಿಕೊಳ್ಳುವುದು. ದಾಖಲಾತಿ ಪ್ರಕಿಯೆಯಲ್ಲಿ ಮತ್ತು ಆಯ್ಕೆ ಪ್ರಕ್ರಿಯೆಗಳಲ್ಲಿ ಮುಂದಿನ ಯಾವುದೇ ಬದಲಾವಣೆಗಾಗಿ ಆದರ್ಶ ವಿದ್ಯಾಲಯಗಳನ್ನು ಹಾಗೂ http://www.schooleducation.kar.nic.inಗಳ ಮೂಲಕ ಪೋಷಕರು ಹಾಗೂ ಮಕ್ಕಳು ತಿಳಿದುಕೊಳ್ಳುವುದು

ರಾಜ್ಯ ಯೋಜನಾ ನಿರ್ದೇಶಕರು
ಸಮಗ್ರ ಶಿಕ್ಷಣ-ಕರ್ನಾಟಕ, ಬೆಂಗಳೂರು

ಪ್ರತಿಯನ್ನು ಅಗತ್ಯ ಕ್ರಮಕ್ಕಾಗಿ ಕಳುಹಿಸಲಾಗಿದೆ.

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾವಿ ಮತ್ತು ಕಲಬುರಗಿ ವಿಭಾಗ ರವರಿಗೆ ಅಗತ್ಯ ಕ್ರಮಕ್ಕಾಗಿ.
2. ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಆಯುಕ್ತರ ಕಛೇರಿ, ಬೆಂಗಳೂರು ರವರಿಗೆ ಅಗತ್ಯ ಕ್ರಮಕ್ಕಾಗಿ.
3. ನಿರ್ದೇಶಕರು, ಪ್ರೌಢ ಶಿಕ್ಷಣ, ಆಯುಕ್ತರ ಕಛೇರಿ, ಬೆಂಗಳೂರು ರವರಿಗೆ ಅಗತ್ಯ ಕ್ರಮಕ್ಕಾಗಿ.
4. ನಿರ್ದೇಶಕರು, ಡಿ.ಎಸ್.ಈ.ಆರ್.ಟಿ, ಬೆಂಗಳೂರು ರವರಿಗೆ ಅಗತ್ಯ ಕ್ರಮಕ್ಕಾಗಿ.
5. ನಿರ್ದೇಶಕರು(ಗುಣಮಟ್ಟ), ಸಮಗ್ರ ಶಿಕ್ಷಣ-ಕರ್ನಾಟಕ, ಬೆಂಗಳೂರು ರವರಿಗೆ ಅಗತ್ಯ ಕ್ರಮಕ್ಕಾಗಿ.
6. ಸಹ ನಿರ್ದೇಶಕರು, ಕೇಂದ್ರೀಯ ದಾಖಲಾತಿ ಘಟಕ, ಬೆಂಗಳೂರು ರವರಿಗೆ ಅಗತ್ಯ ಕ್ರಮಕ್ಕಾಗಿ.
7. ಉಪನಿರ್ದೇಶಕರು(ಆಢಳೀತ) ಮತ್ತು ಉಪನಿರ್ದೇಶಕರು(ಅಭಿವೃದ್ಧಿ) ರವರಿಗೆ ಅಗತ್ಯ ಕ್ರಮಕ್ಕಾಗಿ.
8. ಕಾರ್ಯಕ್ರಮಾಧಿಕಾರಿಗಳು, ಎಸ್.ಎ.ಟಿ.ಎಸ್. ವಿಭಾಗ, ಸಮಗ್ರ ಶಿಕ್ಷಣ-ಕರ್ನಾಟಕ ರವರು ವಿದ್ಯಾವಾಹಿನಿಗೆ ಅಗತ್ಯವಿರುವಂತೆ ತಂತ್ರಾಂಶವನ್ನು ದಿನಾಂಕ 14/05/2019 ರೊಳಗಾಗಿ ರೂಪಿಸುವ ಕ್ರಮಕ್ಕಾಗಿ.
9. ಕಛೇರಿ ಪ್ರತಿ.

ಪ್ರತಿಯನ್ನುಗೌರವ ಪೂರಕವಾಗಿ ಸಲ್ಲಿಸಿದೆ.

1. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ & ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.